International Journal of Kannada Research 2023; 9(4): 119-122

International Journal of Kannada Research
www.kannadajournal.com

**ISSN: 2454–5813**
IJKR 2023; 9(4): 119-122
© 2023 IJKR
www.kannadajournal.com
Received: 27-10-2023
Accepted: 29-11-2023

**ಡಾ. ಎಂ.ಬಿ. ಸುರೇಶ**
ಕನ್ನಡ ಸಹ ಪ್ರಾಧ್ಯಾಪಕರು,
ಮಹಾರಾಜ ಕಾಲೇಜು, ಮೈಸೂರು,
ಕರ್ನಾಟಕ, ಭಾರತ

**Corresponding Author:**
**ಡಾ. ಎಂ.ಬಿ. ಸುರೇಶ**
ಕನ್ನಡ ಸಹ ಪ್ರಾಧ್ಯಾಪಕರು,
ಮಹಾರಾಜ ಕಾಲೇಜು, ಮೈಸೂರು,
ಕರ್ನಾಟಕ, ಭಾರತ

# ವಯಸ್ಕರ ಶಿಕ್ಷಣ ತಜ್ಞ, ಸಾಹಿತಿ ನ. ಭದ್ರಯ

**ಡಾ. ಎಂ.ಬಿ. ಸುರೇಶ**

**DOI:** https://doi.org/10.22271/24545813.2023.v9.i4b.909

**ಪೀಠಿಕೆ**

ನಭ ಎಂದೇ ಪ್ರಖ್ಯಾತರಾಗಿರುವ ನ. ಭದ್ರಯ್ಯನವರು ಎಲೆಮರೆಕಾಯಿಯ ಹಾಗೆ ತಮ್ಮ ಕ್ಷೇತ್ರದಲ್ಲಿ ಮಹತ್ತರ ಸಾಧನೆಯನ್ನು ಮಾಡಿರುವವರು. ಪ್ರಪಂಚ ಪರ್ಯಟನೆ ಮಾಡಿ ವಿಶ್ವದಲ್ಲಿ ಸಾಕ್ಷರತಾ ಆಂದೋಲನ ಮಾಡಿದ, ಯುವಜನತೆ ಮತ್ತು ವೃದ್ಧರು ಅಕ್ಷರ ಕಲಿಯಲೇಬೇಕೆಂದು 'ವಯಸ್ಕರ ಶಿಕ್ಷಣ' ಪ್ರಾರಂಭಿಸಿದ, ಗ್ರಾಮಗಳು ದೇಶದ ಜೀವನಾಡಿ ಅವುಗಳ ಪುರೋಭಿವೃದ್ಧಿಗಾಗಿ 'ವಿದ್ಯಾಪೀಠ' ಸ್ಥಾಪಿಸಿ ತನ್ಮೂಲಕ ಜಾಗೃತಿ ಉಂಟುಮಾಡಿದವರು ನ. ಭದ್ರಯ್ಯನವರು. ಯುಗದ ಕವಿ, ಜಗದ ಕವಿಯಾದ ಕುವೆಂಪು ಅವರು "ನನ್ನ ಜೀವಮಾನದಲ್ಲಿ ನಾನು ಕಂಡ ಮಹಾ ವಿಭೂತಿ ಪ್ರಮಾಣದ, ಶ್ರೀಸಾಮಾನ್ಯ ವ್ಯಕ್ತಿಗಳಲ್ಲಿ ಶ್ರೀ ನ. ಭದ್ರಯ್ಯನವರು ಅತ್ಯಂತ ಮಹೋನ್ನತರಾದ ವ್ಯಕ್ತಿ ಎಂದು ನಾನು ಭಾವಿಸಿದ್ದೇನೆ... ಅತ್ಯಂತ ಮಹತ್ಕಾರ್ಯಗಳನ್ನು ಮಾಡಿದ್ದಾರೆ. ಪ್ರಪಂಚದ ನಾನಾ ದೇಶಗಳಲ್ಲಿ, ಕಾಡು ಜನರಿಂದ ಹಿಡಿದು ಅತ್ಯಂತ ಮುಂದುವರೆದ ದೇಶಗಳ ನಾಗರೀಕ ವ್ಯಕ್ತಿಗಳೊಡನೆ ಮೈತ್ರಿ ಸಂಪಾದಿಸಿದ್ದಾರೆ. ನಿಜವಾದ ಅರ್ಥದಲ್ಲಿ ಜಗದ್ವ್ಯಕ್ತಿ. ನನ್ನ ಕಲ್ಪನೆಯ ವಿಶ್ವಮಾನವರಾಗಿದ್ದಾರೆ"[೧] ಎಂದು ಹಾಡಿ ಹೊಗಳಿರುವ ನ. ಭದ್ರಯ್ಯನವರನ್ನು ತೆಂಗಿನಮರಕ್ಕೆ ಹೋಲಿಸಬಹುದು. ತೆಂಗಿನಮರ ಬೆಳೆದಂತೆ ಕೆಳಗಿನ ಗರಿಗಳು ಒಂದೊಂದಾಗಿ ಕಳಚಿ ಬೀಳುತ್ತವೆ. ಬಿದ್ದಗರಿಗಳು ತಮ್ಮ ಗುರುತನ್ನು ಉಳಿಸಿಹೋಗುತ್ತವೆ. ಹಾಗೆಯೇ ಮಹಾಪುರುಷರಾದ ನ. ಭದ್ರಯ್ಯನವರು ಎನ್ನಬಹುದು.

ಅರ್ಜುನಪುರಿ ಅಪ್ಪಾಜಿಗೌಡರು "ಮಹಾಪುರುಷರ ಬದುಕು ಹೀಗೆಯೇ ಹೌದು, ಬರುತ್ತಾರೆ, ಸೇವೆಯಲ್ಲಿ ಸವೆಯುತ್ತಾರೆ. ನೂರಾರು ದೀಪಗಳನ್ನು ಹೊತ್ತಿ ಉರಿಯುವಂತೆ ಮಾಡುತ್ತಾರೆ. ತಾವು ಅಳಿದರೂ ತಾವು ಹಚ್ಚಿದ ನೂರಾರು ಸಾವಿರಾರು ದೀಪಗಳ ಬೆಳಕಿನಲ್ಲಿ ಚಿರಂಜೀವಿಗಳಾಗಿ ಇರುತ್ತಾರೆ. ನ. ಭದ್ರಯ್ಯನವರು ಈ ವರ್ಗಕ್ಕೆ ಸೇರಿದ ಅಪ್ಪಟ ಮನುಷ್ಯರು"[೨] ಎನ್ನುತ್ತಾರೆ. ಭದ್ರಯ್ಯನವರ ಬದುಕನ್ನು ನೋಡಿದರೆ ಅಪ್ಪಾಜಿಗೌಡರ ಮಾತು ಅತಿಶಯೋಕ್ತಿ ಅನಿಸುವುದಿಲ್ಲ. ಇಡೀ ಜೀವನ ಪ್ರಪಂಚ ಪರ್ಯಟನೆ ಮಾಡುತ್ತಲೇ ಪ್ರಪಂಚದ ಅನೇಕರಿಗೆ ಸಾಕ್ಷರತೆಯ ಮಹತ್ವವನ್ನು ತಿಳಿಸಿದ್ದಾರೆ. ಒಂದು ರೀತಿಯಲ್ಲಿ ವಯಸ್ಕರ ಶಿಕ್ಷಣ ಮತ್ತು ಸಾಕ್ಷರತಾ ಆಂದೋನವನ್ನು ಮಾಡಿದ ಕ್ರಾಂತಿಪುರುಷ ಎಂತಲೇ ಹೇಳಬಹುದು.

ಮಂಡ್ಯ ಜಿಲ್ಲೆ ಪಾಂಡವಪುರ ತಾಲ್ಲೂಕು ನೀಲನಹಳ್ಳಿ ಎಂಬ ಕುಗ್ರಾಮದಲ್ಲಿ ಬಡರೈತರಾದ ನಡ್ಲೇಗೌಡ ಮತ್ತು ತಾಯಮ್ಮ ದಂಪತಿಗಳ ಪುತ್ರರಾಗಿ ಸೆಪ್ಟಂಬರ್ ೦೬, ೧೯೧೨ರಲ್ಲಿ ಜನಿಸಿದರು. ೧೯೧೨ರಿಂದ ೧೯೮೮ರವರೆಗೆ ಅವರು ಬದುಕಿದ ರೀತಿ, ವಿಶ್ವದಾದ್ಯಂತ ಮಾಡಿದ ಸೇವೆ ವಿಶೇಷವಾದುದು. ಮಂಡ್ಯದ ಮಣ್ಣಿನಲ್ಲಿ ಜನಿಸಿದ ಇವರು ಮಂಡ್ಯದ ಕೀರ್ತಿಯನ್ನು ವಿಶ್ವಸಂಸ್ಥೆಯವರೆಗೆ ಕೊಂಡೊಯ್ದದ್ದು ಅಸದೃಶ ಸಾಧನೆಯೇ ಸರಿ.

ಮೂಲತಃ ನಾಗಮಂಗಲ ತಾಲ್ಲೂಕಿನ ಕರಡಳ್ಳಿ ಗ್ರಾಮದ ನಡ್ಲೇಗೌಡರು ಸಾಮಾನ್ಯ ರೈತರಾಗಿದ್ದು, ಪಾಂಡವಪುರದ ನೀಲನಹಳ್ಳಿಯ ಪಟೇಲ್ ತಿಮ್ಮೇಗೌಡರ ಮಗಳಾದ ತಾಯಮ್ಮನವರನ್ನು

---

[೧] ಉದ್ಧೃತ, ಅರ್ಜುನಪುರಿ ಅಪ್ಪಾಜಿಗೌಡ : ನ. ಭದ್ರಯ್ಯ, ಪುಟ – ೧

[೨] ಅರ್ಜುನಪುರಿ ಅಪ್ಪಾಜಿಗೌಡ : ನ. ಭದ್ರಯ್ಯ, ಪುಟ – iX

ಮದುವೆಯಾದರು. ಮದುವೆಯಾದ ಕೆಲದಿನಗಳಲ್ಲೇ ತಾಯಮ್ಮನವರ ತಂದೆ ವಿಧಿವಶರಾಗಲಾಗಿ ಒಂದೂವರೆ ವರ್ಷದ ತಮ್ಮ ಮತ್ತು ತಾಯಿಯನ್ನು ನೋಡಿಕೊಳ್ಳಲು ನೀಲನಹಳ್ಳಿಗೆ ಬರುತ್ತಾರೆ. ವಂಶಪಾರಂಪರ್ಯವಾಗಿ ಬಂದಿದ್ದ ಪಟೇಲಿಕೆ ಕೈ ತಪ್ಪಿ ಹೋಗದಂತೆ ಓದು ಬರಹ ಬಾರದ ತಾಯಮ್ಮನವರೇ ಪಟೇಲಿಕೆಯ ಎಲ್ಲ ವಿವರಗಳನ್ನು ಬಹಳ ಬೇಗ ಕಲಿತು ನಿಭಾಯಿಸುತ್ತಾಳೆ. ಹೀಗಾಗಿ ನಡ್ಲೇಗೌಡರು ಕರಡಹಳ್ಳಿಯವರಾದರೂ ನೀಲನಹಳ್ಳಿಯಲ್ಲಿಯೇ ನೆಲೆ ನಿಲ್ಲುತ್ತಾರೆ. ಭದ್ರಯ್ಯನವರು ಹುಟ್ಟಿ ಬೆಳೆದದ್ದೆಲ್ಲ ನೀಲನಹಳ್ಳಿಯ ಪರಿಸರದಲ್ಲಿಯೇ. ಆರ್ಥಿಕವಾಗಿ ಅನುಕೂಲಸ್ಥರೂ, ಮಗನ ಮೇಲೆ ಅಪಾರ ಪ್ರೀತಿಯನ್ನು ಹೊಂದಿದ್ದ ನಡ್ಲೇಗೌಡರು ಶಾಲೆಗಳೇ ಇಲ್ಲದ ಆ ಕಾಲದಲ್ಲೇ ಮಗನನ್ನು ಮರಳು ಶಾಲೆಗೆ ಅಂದರೆ ಮೇಲುಕೋಟೆ ಅಯ್ಯನವರು ನೀಲನಹಳ್ಳಿಯಲ್ಲಿ ಮರಳಿನ ಮೇಲೆ ಅಕ್ಷರ ಕಲಿಸುತ್ತಿದ್ದು ಅಲ್ಲಿಗೆ ಸೇರಿಸಿದರು. ಅನಂತರ ದೂರದ ಲಕ್ಷ್ಮೀಸಾಗರಕ್ಕೆ ಹೆಚ್ಚು ಓದಲು ಕಳಿಸುತ್ತಾರೆ. ಸಣ್ಣವಯಸ್ಸಿನಲ್ಲೇ ಸಾತ್ವಿಕ ವ್ಯಕ್ತಿತ್ವ, ಶುದ್ಧ ಮನಸ್ಸು ಮತ್ತು ನವಿರಾದ ಆಲೋಚನೆಯನ್ನು ಹೊಂದಿದ್ದವರು. ಪ್ರಾಥಮಿಕ ಶಿಕ್ಷಣವನ್ನು ಮುಗಿಸಿ ಮಾಧ್ಯಮಿಕ ಶಿಕ್ಷಣವನ್ನು ಪಾಂಡವಪುರದಲ್ಲೂ ಪ್ರೌಢಶಿಕ್ಷಣವನ್ನು ಮೈಸೂರಿನಲ್ಲೂ ಪಡೆಯುತ್ತಾರೆ. ಓದಿಗಾಗಿ ಮೈಸೂರಿಗೆ ಬಂದ ಭದ್ರಯ್ಯನವರು ಮೊದಲ ಬಾರಿಗೆ ಮೈಸೂರನ್ನು ನೋಡಿದವರು. ಪುಟ್ಟ ಗ್ರಾಮದಿಂದ ಬಂದ ಅವರಿಗೆ ಮೈಸೂರಿನ ಶಾಲಾ ವಾತಾವರಣ ಉಸಿರುಗಟ್ಟಿಸಿದಂತಾಗಿ ಕಣ್ಣೀರು ಸುರಿಸಿದ್ದೂ ಇದೆ. ಓದಿನ ಬಗ್ಗೆ ಅಪಾರ ಶ್ರದ್ಧೆಯನ್ನು ಇಟ್ಟುಕೊಂಡಿದ್ದ ಭದ್ರಯ್ಯನವರು ಸ್ನೇಹಿತರ ಮನೆಗೆ ಹೋದಾಗ ಉತ್ತಮ ಪುಸ್ತಕಗಳನ್ನು ನೋಡಿದರೆ ಯಾರಿಗೂ ತಿಳಿಯದ ಹಾಗೆ ಆ ಪುಸ್ತಕವನ್ನು ತೆಗೆದುಕೊಂಡು ಹೋಗಿ, ಓದಿ ಮತ್ತೆ ಯಾರಿಗೂ ತಿಳಿಯದ ಹಾಗೆ ಅಲ್ಲಿ ತಂದಿಡುತ್ತಿದ್ದರು.

ಉತ್ತರ ಭಾರತದಿಂದ ಬಂದ ಶ್ರೀಮಂತರ ಮನೆಯಲ್ಲಿ ಇದ್ದುಕೊಂಡು ತಮ್ಮ ವಿದ್ಯಾಭ್ಯಾಸವನ್ನು ಮುಂದುವರೆಸಿದರು. ಅವರ ಮನೆಯಲ್ಲಿದ್ದ ವೇಳೆ ಕಳ್ಳತನ ಆರೋಪ ಇವರ ಮೇಲೆ ಬಂದು, ಆರೋಪ ಮುಕ್ತರೂ ಆಗುತ್ತಾರೆ. ಮಕ್ಕಳಿಲ್ಲದಿದ್ದ ಅವರು ಇವರನ್ನು ದತ್ತು ಪಡೆಯಲು ಆಲೋಚಿಸಿದಾಗ ಕಳ್ಳತನ ಆರೋಪ ಹೊರಿಸಿದ ಅವರ ಮನೆಯಲ್ಲಿ ಇರಲು ಒಪ್ಪದೆ ನಿರಾಕರಿಸುತ್ತಾರೆ. ಆದರೂ ಅವರು ಸಾಯುವ ಕಡೆಗಾಲದವರೆಗೂ ಅವರ ಸೇವೆಯನ್ನು ಮಾಡಿ ಉಪ್ಪಿನ ಋಣವನ್ನು ತೀರಿಸುತ್ತಾರೆ. ಪರಿಚಯದವರ ಶಿಫಾರಸ್ಸಿನ ಮೇಲೆ ವಿದ್ಯಾರ್ಥಿನಿಲಯ ಸೇರಿ ವಿದ್ಯಾಭ್ಯಾಸ ಮುಂದುವರೆಸುತ್ತಾರೆ. ತಾವು ಓದುವಾಗಲೇ ಹಳ್ಳಿ ವಿದ್ಯಾರ್ಥಿಗಳಿಗಾಗಿ ತಾವೇ ಒಂದು ವಿದ್ಯಾರ್ಥಿನಿಲಯ ಸ್ಥಾಪಿಸಿ, ಪ್ರತಿಭಾವಂತ ಮಕ್ಕಳೆಂದು ಕಂಡವರಿಗೆ ಪಾಠ ಹೇಳಿ ಹಣ ಹೊಂದಿಸಿ ವಿದ್ಯಾರ್ಥಿನಿಲಯ ನಡೆಸುತ್ತಿದ್ದರು. ಆ ವೇಳೆಗೆ ಭಾರತದಲ್ಲಿ ಆರಂಭವಾಗಿದ್ದ ಸ್ವಾತಂತ್ರ್ಯ ಚಳವಳಿ ಮತ್ತು ಗಾಂಧಿಯವರ ಪ್ರಭಾವಕ್ಕೆ ಒಳಗಾಗಿ ಚಳವಳಿಗೆ ಧುಮುಕಿ ಓದನ್ನು ಅರ್ಧಕ್ಕೆ ನಿಲ್ಲಿಸಿದರು. ವಿದ್ಯೆಯ ಮಹತ್ವವನ್ನು ಅರಿತಿದ್ದ ಭದ್ರಯ್ಯನವರು ಅಕ್ಷರಸ್ಥರಲ್ಲದವರಿಗೆ ತಿಳವಳಿಕೆ ಹೇಳುವುದು ಕಷ್ಟ ಎಂದು ತಿಳಿದು ಅಕ್ಷರ ಕಲಿಸುವ ಆಲೋಚನೆ ಮಾಡುತ್ತಾರೆ. "ಮಕ್ಕಳಿಗೆ ಶಿಕ್ಷಣ ನೀಡುವುದು ಸರಿ. ವಯಸ್ಸಾದವರಿಗೆ ಏನು ಮಾಡಬೇಕು. ಅವರಿಗೆ ಅರ್ಥವಾಗುವಂತೆ ಕಲಿಸಬೇಕು. ಕಲಿತದ್ದು ಮರೆಯದಂತೆ ವಯಸ್ಕರಿಗಾಗಿಯೇ ಪುಸ್ತಕಗಳನ್ನು ಬರೆಯಬೇಕು, ಬರೆಸಬೇಕು, ಸರ್ಕಾರವೇ ಪುಸ್ತಕಗಳನ್ನು ಮುದ್ರಿಸಿ ವಿತರಣೆ ಮಾಡಬೇಕು" ಎಂಬ ಆಲೋಚನೆಯನ್ನು ಹೊಂದಿದ್ದರೂ ಗೊಂದಲ ಅವರನ್ನು ಕಾಡುತ್ತಿತ್ತು. ಹಾಗಾಗಿ 'ಗ್ರಾಮಾಭಿವೃದ್ಧಿ' ಎಂಬ ಸಣ್ಣ ಪತ್ರಿಕೆಯನ್ನು, ಸಣ್ಣ ಮುದ್ರಣಾಲಯವನ್ನೂ ಆರಂಭಿಸಿ, ಹಳ್ಳಿಗಳ ಉದ್ಧಾರದ ಬಗೆಗೆ ಬರೆಯತೊಡಗಿದರು. ಅಲ್ಲದೆ ತಮ್ಮ ಮುದ್ರಣಾಲಯದಲ್ಲಿ ಸ್ವಾತಂತ್ರ್ಯ ಹೋರಾಟದ ವಿಚಾರ ಮತ್ತು ಕರಪತ್ರಗಳನ್ನು ಮುದ್ರಿಸುತ್ತಿದ್ದರಿಂದ ಬ್ರಿಟಿಷ್ ಸರ್ಕಾರ ಮುಟ್ಟುಗೋಲು ಹಾಕಿಕೊಂಡಿತು. ಸ್ವಾತಂತ್ರ್ಯ ಚಳವಳಿಯ ನಾಯಕತ್ವ ವಹಿಸಿಕೊಂಡ ಇವರನ್ನು ಸರ್ಕಾರ ಬಂಧಿಸಿ ಸೆರೆಮನೆಗೆ ಕಳುಹಿಸಿತು.

ಅಪ್ಪಟ ಗಾಂಧಿವಾದಿಯಾಗಿದ್ದ ಭದ್ರಯ್ಯನವರು ಜೈಲಿನಲ್ಲಿನ ಅಪರಾಧಿಗಳ ಮನಃಪರಿವರ್ತನೆಗೆ ಪ್ರಯತ್ನಿಸುತ್ತಾರೆ. ಜೈಲಿನ ಅಧಿಕಾರಿಗಳು ಎಷ್ಟೇ ಹಿಂಸೆ ಕೊಟ್ಟರೂ ಅವರ ವಿರುದ್ಧ ಕೋಪಿಸಿಕೊಳ್ಳದೆ, ದ್ವೇಷದ ಭಾವನೆಯನ್ನು ತಾಳದೆ ಅಹಿಂಸಾವಾದಿಗಳಾಗಿದ್ದರು. ಗಾಂಧಿ ತತ್ವಗಳಿಗೆ ಬದ್ಧರಾಗಿದ್ದ ಭದ್ರಯ್ಯನವರು ಗಾಂಧಿಯವರ ಹಾಗೆ ಮಾಂಸಾಹಾರವನ್ನು ತ್ಯಜಿಸಿ ಸಸ್ಯಾಹಾರಿಗಳಾಗುತ್ತಾರೆ. ಚಿಕ್ಕ ವಯಸ್ಸಿನಿಂದಲೂ ನೈರ್ಮಲ್ಯ, ಶುಚಿಗೆ ಗಮನ ಕೊಡುತ್ತಿದ್ದ ಭದ್ರಯ್ಯನವರು ಸದಾ ಬಿಳಿಯ ಬಟ್ಟೆಯನ್ನೇ ಧರಿಸುತ್ತಾ, ಹೃದಯ ಮತ್ತು ಮನಸ್ಸನ್ನು ಶುಭ್ರವಾಗಿ ಇಟ್ಟುಕೊಂಡಿದ್ದರು. ಪ್ರವಾಸ, ಸಾಕ್ಷರತೆ, ವಯಸ್ಕರ ಶಿಕ್ಷಣ ಮೊದಲಾದವುಗಳ ಜೊತೆಗೆ ಲೇಖಕರಾಗಿಯೂ ಅನೇಕ ಕೃತಿಗಳನ್ನು ರಚಿಸಿದ್ದಾರೆ. ಭದ್ರಯ್ಯನವರು ಗ್ರಾಮೋದ್ಧಾರ, ಬಿಟಿಷರಿಂದ ಬಿಡುಗಡೆ, ಶೈಕ್ಷಣಿಕ ಪ್ರಗತಿ ಮೊದಲಾದವುಗಳ ಬಗೆಗೆ ಬರೆಯತೊಡಗುತ್ತಾರೆ. ರಾಷ್ಟ್ರಪಿತನನ್ನು ಕುರಿತು 'ಗಾಂಧೀಜಿ' ಕೃತಿಯನ್ನು ಬರೆದಿರುವುದಲ್ಲದೆ, 'ಅಶೋಕ ಚಕ್ರವರ್ತಿ', 'ಪುಣ್ಯಕೋಟಿ', 'ಅರ್ಪಣೆ', 'ಗಾಂಧೀ ಪ್ರಮಾಣ ವಚನಗಳು', 'ಆಕಾಶಲೋಕ', 'ಪ್ರಪಂಚದ ಕಥೆ', 'ನಿಮ್ಮ ದೇಹ', 'ಕುಮಾರವ್ಯಾಸನ ಕರ್ಣ', 'ಸಾಹಸ ಕಥೆಗಳು', 'ಯಕ್ಷನೌಕೆ', 'ಸಾಗರ ಸಂಶೋಧನೆ', 'ಧ್ರುವಗಳ ಸಂಶೋಧನೆ', 'ಎವರೆಸ್ಟ್ ಆರೋಹಣ', 'ಕ್ಯಾಮರೂನಿನ ಬಣಗಳೊಡನೆ', 'ಪ್ರಪಂಚ ಪರ್ಯಟನೆ', 'ಯುನೆಸ್ಕೋ ಸೇವೆಯಲ್ಲಿ', 'ನಾ ಕಂಡ ಇರಾನ್', 'ನಾ ಕಂಡ ಕೆನಿಯಾ', 'ನಾ ಕಂಡ ಇಂಡೋನೇಷಿಯಾ', 'ನಡೆದು ನೋಡು ಕೊಡಗಿನ ಬೆಡಗ', 'ಆರೋಗ್ಯ ಬೋಧಿನಿ', 'ಧರಣಿ ಮಂಡಲ ಮಧ್ಯದೊಳಗೆ' ಮೊದಲಾದ ಕೃತಿಗಳನ್ನು ರಚಿಸಿ ಪ್ರಕಟಿಸಿದ್ದಾರೆ.

ಪ್ರವಾಸ ಪ್ರಿಯರಾದ ಭದ್ರಯ್ಯನವರು ಬಾಲ್ಯದಿಂದಲೂ ತಿರುಗಾಡುವ, ಪ್ರವಾಸ ಮಾಡುತ್ತಲೇ ಜನಜೀವನದ ವೈವಿಧ್ಯವನ್ನು ತಿಳಿದುಕೊಳ್ಳುವ ಕುತೂಹಲವನ್ನು ಹೊಂದಿದ್ದರು. ನಗರಗಳಲ್ಲಿ ಕಾಲು ನಡಿಗೆಯಲ್ಲೇ ತಿರುಗಾಡುತ್ತಾ ಸೂಕ್ಷ್ಮವಾಗಿ ಪ್ರದೇಶಗಳನ್ನು ತಿಳಿಯುವುದು ಇವರಿಗೆ ಪ್ರಿಯವಾದ ವಿಚಾರವಾಗಿತ್ತು. ಮಹಾರಾಷ್ಟ್ರದ ಸೇಂಗಾವ್‌ಗೆ ಭೇಟಿಕೊಟ್ಟು ಗಾಂಧಿಯವರನ್ನು ಭೇಟಿ ಮಾಡಿ ಗ್ರಾಮಾಭ್ಯುದಯದ ಬಗ್ಗೆ ತಾವೇ ತಯಾರಿಸಿದ ಯೋಜನೆಯನ್ನು ತೋರಿಸುತ್ತಾರೆ. ಗಾಂಧೀಜಿಯವರು ನೋಡಿ, ಮುಗುಳ್ನಕ್ಕು ಹೀಗೆ ಮಾಡಿದರೆ ಹಳ್ಳಿಗಳು ಉದ್ಧಾರವಾಗುತ್ತವೆ ಎಂದು ಸಲಹೆ ನೀಡಿದ್ದೀಯೆ ಆದರೆ ಈ ಬಗ್ಗೆ ನೀನು ಏನು ಮಾಡಬೇಕೆಂದಿದ್ದೀಯೇ ಎಂಬುದನ್ನು ಹೇಳಿಲ್ಲವಲ್ಲ? ಎಂದಾಗ ಪರಿವರ್ತಿತರಾದ ಭದ್ರಯ್ಯನವರು ಮುಂದೆ ಯಾವುದೇ ಯೋಜನೆಯನ್ನು ಮಾಡುವಾಗಲು ತಾವೇ ಕೇಂದ್ರ ಬಿಂದುವಾಗುತ್ತಿದ್ದರು. ಪತ್ರಿಕೆ, ಪುಸ್ತಕ ಮೊದಲಾದವುಗಳ ಮೂಲಕ ಹಣ ಉಳಿತಾಯವಾದಾಗ ವಿದೇಶಿ ಪ್ರವಾಸ ಹೋಗುವ ಆಸೆ ಉಂಟಾಗುತ್ತದೆ. ಪರಿಣಾಮ ಯೂರೋಪ್, ಬ್ರಿಟನ್ ಪ್ರವಾಸ ಕೈಗೊಳ್ಳುತ್ತಾರೆ. ಪ್ರವಾಸ ಮಾಡುವ ಸಂದರ್ಭದಲ್ಲಿ ಡೆನ್‌ಮಾರ್ಕ್ ದೇಶದಲ್ಲಿನ ವಯಸ್ಕರ ಶಾಲೆಗಳು ಇವರನ್ನು ಬಹಳ ಆಕರ್ಷಿಸಿ, ಭಾರತದಲ್ಲಿಯೂ ಇಂತಹ ಶಾಲೆಗಳನ್ನು ಆರಂಭಿಸಬೇಕು ಎಂದುಕೊಳ್ಳುತ್ತಾರೆ. ಭಾರತಕ್ಕೆ ಮರಳಿ ಬಂದ ಕೂಡಲೇ ವಯಸ್ಕರ ಶಿಕ್ಷಣಕ್ಕಾಗಿ ಗಾಂಧಿಯವರ ಗ್ರಾಮ ಸ್ವರಾಜ್ಯದ ಪರಿಕಲ್ಪನೆಯನ್ನು ಹೊತ್ತ ವಿದ್ಯಾಪೀಠಗಳನ್ನು ಆರಂಭಿಸುತ್ತಾರೆ. ಮೊತ್ತ ಮೊದಲು

ನಂಜನಗೂಡಿನಲ್ಲಿ ವಿದ್ಯಾಪೀಠವನ್ನು ಸ್ಥಾಪಿಸಿ ತಾವೇ ಮೇಲ್ವಿಚಾರಣೆಗೆ ನಿಲ್ಲುತ್ತಾರೆ.

ವಿದ್ಯಾಪೀಠದಲ್ಲಿ ಗ್ರಾಮೀಣ ಕರಕುಶಲ ಕಲೆಗಳಿಗೆ ತರಬೇತಿ, ಚರಕ ನೂಲುವುದು, ಆಧುನಿಕ ಬೇಸಾಯ, ತೋಟಗಾರಿಕೆ, ಕೋಳಿ ಸಾಕಣೆ, ಹೈನುಗಾರಿಕೆ ಕಲಿಸುವುದರ ಜೊತೆ ಜೊತೆಗೆ ಅಕ್ಷರಾಭ್ಯಾಸವನ್ನೂ ಮಾಡಿಸುತ್ತಾರೆ. ಇವರ ಕಾರ್ಯವನ್ನು ನೋಡಿ ರಾಜ್ಯ ಸರ್ಕಾರ ವಯಸ್ಕರ ಶಿಕ್ಷಣಕ್ಕೆ ಪ್ರೋತ್ಸಾಹವನ್ನು ನೀಡಿದುದಲ್ಲದೆ, ಭದ್ರಯ್ಯನವರನ್ನು 'ರಾಜ್ಯ ವಯಸ್ಕರ ಶಿಕ್ಷಣ ಸಮಿತಿ' ಕಾರ್ಯದರ್ಶಿಯನ್ನಾಗಿ ನೇಮಿಸುತ್ತದೆ. ವಯಸ್ಕರ ಶಿಕ್ಷಣ ಕ್ಷೇತ್ರದಲ್ಲಿ ವಿಶ್ವಮಟ್ಟದಲ್ಲಿ ಹೆಸರು ಮಾಡಿ ಕೀರ್ತಿಗಳಿಸಿದ್ದ ಪ್ರೊ. ಈಗಲ್ ಟನ್ ಪರಿಚಯವಾಗುತ್ತದೆ. ತನ್ಮೂಲಕ ಭದ್ರಯ್ಯನವರ ಕೆಲಸ ಕಾರ್ಯಗಳು ವಿಶ್ವವ್ಯಾಪ್ತಿಗೆ ಪ್ರಸಾರಗೊಳ್ಳುತ್ತವೆ. ಇವರ ಕೀರ್ತಿ ವಿಶ್ವಸಂಸ್ಥೆಗೂ ತಲುಪಿ ಯುನೆಸ್ಕೊ ಭದ್ರಯ್ಯನವರನ್ನು ಗೌರವಪೂರ್ವಕವಾಗಿ ತನ್ನಲ್ಲಿಗೆ ಆಹ್ವಾನಿಸಿ, ವಯಸ್ಕರ ಶಿಕ್ಷಣ ಸಲಹೆಗಾರರಾಗಿ, ತಜ್ಞರಾಗಿ ಕೆಲಸ ಮಾಡಬೇಕೆಂದು ವಿನಂತಿ ಮಾಡುತ್ತದೆ. ವಿದ್ಯಾಪೀಠಗಳ ಬಗ್ಗೆ ಭದ್ರಯನವರ ಅಭಿಪ್ರಾಯ ಈ ರೀತಿ ಇತ್ತು. "ವಿದ್ಯಾಪೀಠ ಜನತಾ ಕಾಲೇಜುಗಳಂತೆ ಕೆಲಸ ಮಾಡಬೇಕು. ಹಳ್ಳಿಗಳಲ್ಲಿ ಸೃಜನ-ಸುಜನಶೀಲ ನಾಯಕರನ್ನು ರೂಪಿಸಬೇಕು. ಶಿಕ್ಷಣ ಕೇವಲ ಪುರುಷರಿಗಷ್ಟೇ ಅಲ್ಲ, ಮಹಿಳೆಯರಿಗೂ ದೊರಕಬೇಕು. ಮಹಿಳೆಯೊಬ್ಬಳು ಅಕ್ಷರ ಕಲಿತರೆ, ಇಡೀ ಮನೆಯೇ ಕಲಿತಂತಾಗುತ್ತದೆ. ಇಡೀ ಸಮಾಜದಲ್ಲಿ ಶೇ. ೫೦ರಷ್ಟು ಮಹಿಳೆಯರಿದ್ದಾರೆ. ಅವರೆಲ್ಲರೂ ಅಕ್ಷರಸ್ಥರಾದರೆ ಗ್ರಾಮಗಳಲ್ಲಿ ಬೆಳಕು ನೀಡುವ ನಂದಾದೀಪಗಳಾಗುತ್ತಾರೆ ಎನ್ನುತ್ತಿದ್ದರು"[೩].

ವಯಸ್ಕರ ಶಿಕ್ಷಣ ಸಮಿತಿ ಅಧ್ಯಕ್ಷರಾದಾಗ 'ಬೆಳಕು' ಎಂಬ ವಾರಪತ್ರಿಕೆ, 'ಪುಸ್ತಕ ಪ್ರಪಂಚ' ಎಂಬ ಮಾಸಪತ್ರಿಕೆಗಳು ಪ್ರಕಟಗೊಳ್ಳುವಂತೆ ಮಾಡುತ್ತಾರೆ. ಭಾರತದ ಜನರಿಗೆ ರಾಮಾಯಣ, ಮಹಾಭಾರತ ಎಂದರೆ ಅಚ್ಚುಮೆಚ್ಚು. ಅವುಗಳ ಮೂಲಕ ವಯಸ್ಕರಿಗೆ ಅಧ್ಯಯನದ ರುಚಿಯನ್ನು ಹತ್ತಿಸಲು ತೀರ್ಮಾನಿಸಿ ಮಹಾಕವಿ ಕುವೆಂಪು ಅವರಿಂದ 'ಜನಪ್ರಿಯ ವಾಲ್ಮೀಕಿ ರಾಮಾಯಣ', ಎ.ಆರ್. ಕೃಷ್ಣಶಾಸ್ತ್ರಿಗಳಿಂದ 'ವಚನ ಭಾರತ', ಪ್ರೊ. ಕೆ. ವೆಂಕಟರಾಮಪ್ಪನವರಿಂದ 'ವಚನ ಭಾಗವತ' ಬರೆಸಿ, ತಾವೇ ಪ್ರಕಟಿಸಿ, ಕಡಿಮೆ ಬೆಲೆಗೆ ಲಾಭ-ನಷ್ಟಗಳಿಲ್ಲದಂತೆ ಮಾರಾಟ ಮಾಡುತ್ತಾರೆ. ವಯಸ್ಕರ ಶಿಕ್ಷಣವನ್ನು ಹೀಗೆ ಸರಿದಾರಿಯಲ್ಲಿ ನಡೆಸುತ್ತಾ ಸಾಕಷ್ಟು ಜನರನ್ನು ವಿದ್ಯಾವಂತರನ್ನಾಗಿ ಮಾಡುತ್ತಿರುವ ಭದ್ರಯ್ಯನವರನ್ನು ಯಾರಾದರೂ 'ವಯಸ್ಕರ ಶಿಕ್ಷಣ ತಜ್ಞ' ಎಂದರೆ ಇವರು 'ತಪ್ಪು ಹೇಳುತ್ತೀದ್ದೀರಿ, ನಾನು ವಯಸ್ಕರ ಶಿಕ್ಷಣದ ಮೊದಲ ವಿದ್ಯಾರ್ಥಿ' ಎಂದು ಹೇಳುವ ಮೂಲಕ ತಮ್ಮ ವಿನಯ ಪ್ರದರ್ಶನ ಮಾಡುತ್ತಿದ್ದರು.

ಸೇವೆಗಾಗಿಯೇ ತಮ್ಮ ಬದುಕನ್ನು ಮುಡಿಪಾಗಿಟ್ಟಿದ್ದ ಭದ್ರಯ್ಯನವರು ಸಂಸಾರಿಯಾದ ಘಟನೆ ರೋಮಾಂಚನಕಾರಿ. ನ್ಯೂಹೆವೆನ್‌ನ ಧಾರ್ಮಿಕ ಸಮ್ಮೇಳನದಲ್ಲಿ ಭದ್ರಯ್ಯನವರು ಭಾಗವಹಿಸಿದ್ದಾಗ ಮಿಸ್ ಈವೆನ್ಸ್ ಅವರನ್ನು ಮೊದಲ ಬಾರಿ ನೋಡುತ್ತಾರೆ. ಅಮೆರಿಕಾದ ಪ್ರಸಿದ್ಧ ವ್ಯಾಸರ್ ಮಹಿಳಾ ಕಾಲೇಜು ವಿದ್ಯಾರ್ಥಿನಿಯಾದ ಈವೆನ್ಸ್ ಕೊಲಂಬಿಯಾ ವಿಶ್ವವ್ಯಾನಿಲಯದಲ್ಲಿ ವಯಸ್ಕರ ಶಿಕ್ಷಣದಲ್ಲಿ ಪದವೀದರೆಯಾಗಿದ್ದು, ಫುಲ್ ಬ್ರೈಟ್ ಸ್ಕಾಲರ್‌ಶಿಪ್ ಪಡೆದಿದ್ದಳು. ಭಾರತಕ್ಕೆ ವಯಸ್ಕರ ಶಿಕ್ಷಣ ಮತ್ತು ಗಾಂಧೀಜಿ ತತ್ವಗಳನ್ನು ಕುರಿತು ಅಧ್ಯಯನ ಮಾಡಲು ಬಂದ ಈವೆನ್ಸ್‌ಗೆ ಮಾರ್ಗದರ್ಶಕರಾಗಿ ನಿಂತವರು ಭದ್ರಯ್ಯನವರು. ಇಬ್ಬರಲ್ಲೂ ಪರಸ್ಪರ ಅನುರಾಗ ಅರಳಿ ಮದುವೆಯ ತೀರ್ಮಾನವನ್ನು ಮಾಡುತ್ತಾರೆ. ಅದರಂತೆ ಯಾವುದೇ ಆಡಂಬರ, ದುಂದುವೆಚ್ಚವಿಲ್ಲದೆ ಇಂಡೋನೇಷ್ಯಾದ ಡಕಾರ್ತ ನಗರದಲ್ಲಿ ೨೮-೧೧-೧೯೬೩ರಂದು ಸರಳವಾಗಿ ಮದುವೆಯಾದರು. ಆಗ ಭದ್ರಯ್ಯನವರಿಗೆ ೫೦ರ ಪ್ರಾಯ. ಮಿಸ್ ಈವೆನ್ಸ್ ಇವರನ್ನು ಮದುವೆಯಾದ ಮೇಲೆ 'ಶಾಂತಿ' ಎಂದು ತಮ್ಮ ಹೆಸರನ್ನು ಬದಲಾಯಿಸಿಕೊಂಡು ೨೬ ವರ್ಷಗಳು ಸುಖ, ನೆಮ್ಮದಿಯ ಸಂಸಾರವನ್ನು ನಡೆಸಿದರು. ಇವರಿಗೆ 'ಶುಭಂಕರಿ' ಎಂಬ ಮಗಳು ಜನಿಸುತ್ತಾಳೆ.

ಪುಸ್ತಕಗಳ ಗೌರವಧನದ ಸ್ವಯಾರ್ಜಿತ ಹಣದಿಂದ ಯೂರೋಪ್ ಪ್ರವಾಸ ಮಾಡಿ ಬಂದ ಭದ್ರಯ್ಯನವರಿಗೆ ಯಾವುದೇ ಸಂಬಳ ಇರಲಿಲ್ಲ. ಹಾಗಾಗಿ ಜೀವನ ನಿರ್ವಹಣೆಗಾಗಿ ಬರೆಯುವುದನ್ನೇ ರೂಢಿ ಮಾಡಿಕೊಂಡಿದ್ದರು. ಹಗಲೆಲ್ಲಾ ವಯಸ್ಕರ ಶಿಕ್ಷಣ ಸಮಿತಿಯ ಕೆಲಸವಾದರೆ, ರಾತ್ರಿ ಓದು, ಬರವಣಿಗೆ ನಡೆಸುತ್ತಿದ್ದರು. ಈ ವೇಳೆಗೆ ಇವರ ಅದೃಷ್ಟದ ಬಾಗಿಲು ತೆಗೆಯಿತು ಎನ್ನುವ ಹಾಗೆ ಅಮೆರಿಕಾ ಫೋರ್ಡ್ ಫೌಂಡೇಷನ್ ಸದಸ್ಯರ ತಂಡ ಮೈಸೂರಿಗೆ ಆಗಮಿಸಿ ವಯಸ್ಕರ ಶಿಕ್ಷಣದ ತಾಯಿ ಬೇರಾದ ಭದ್ರಯ್ಯನವರನ್ನು ಭೇಟಿಯಾಗುತ್ತಾರೆ. ಭದ್ರಯ್ಯನವರ ಅರ್ಪಣಾಭಾವ, ಆಳವಾದ ಜ್ಞಾನ, ವಿನೀತಭಾವ, ಶ್ರಮಭರಿತ ದುಡಿಮೆ ಮತ್ತಷ್ಟು ದೇಶಗಳಿಗೆ ಸಿಗಲಿ ಎಂದು 'ಅರಬ್ ರಾಷ್ಟ್ರಗಳ ಗ್ರಾಮೀಣ ಶಿಕ್ಷಣದ ಅಂತರರಾಷ್ಟ್ರೀಯ ಸಮಿತಿ'ಗೆ ಸದಸ್ಯರಾಗುವಂತೆ ಕೋರುತ್ತಾರೆ. ಇದರಿಂದ ಭದ್ರಯ್ಯನವರಿಗೆ ವಿಶೇಷ ಸ್ಥಾನಮಾನ ದೊರೆತುದಲ್ಲದೆ, ಗೌರವವೂ ಸಿಗುವಂತಾಯಿತು.

ವಿಶ್ವಸಂಸ್ಥೆಯ ಆಹ್ವಾನವನ್ನು ಪಡೆದು ಪಶ್ಚಿಮ ಆಫ್ರಿಕಾದ ಕ್ಯಾಮರೂನ್ ಪ್ರದೇಶದಲ್ಲಿ ಶಿಕ್ಷಣ ಸುಧಾರಣೆಗಾಗಿ ಸಮೀಕ್ಷಾ ಕಾರ್ಯ ಕೈಗೊಳ್ಳುತ್ತಾರೆ. ಡಕಾರ್ತದ ಬಾಂಡುಂಗ್‌ನಲ್ಲಿ ವಯಸ್ಕರ ಶಿಕ್ಷಣವನ್ನು ನೀಡಿ, ಕಲಿತವರಿಗೆ ಪುಸ್ತಕ ಸಾಮಗ್ರಿ ರೂಪಿಸುವ ಕಾರ್ಯದಲ್ಲಿ ನಿರತರಾಗುತ್ತಾರೆ. ಸ್ಥಳೀಯ ಕಲಹವೇರ್ಪಟ್ಟು ದಂಗೆ ಉಂಟಾಗಿ ಡಕಾರ್ತ ನಗರಕ್ಕೆ ಹೋಗುವುದು ಬೇಡ ಎಂದರೂ ಜೀವಕ್ಕಿಂತ ಕೆಲಸ ಮುಖ್ಯ ಎಂದು ಅಲ್ಲೇ ಉಳಿದು ವಹಿಸಿದ ಕೆಸವನ್ನು ಪೂರ್ತಿ ಮಾಡಿ ಮರಳುತ್ತಾರೆ. ಇರಾನಿನ ರಾಜಧಾನಿಯಾದ ಟೆಹರಾನ್ ಸಮೀಪದ ಮರಳುಗಾಡಿನ ಮಧ್ಯೆ ಇರುವ ಡಜ್‌ಫುಲ್ ಎಂಬ ಪಟ್ಟ ನಗರದಲ್ಲಿ 'ಶ್ರಮ ಆಧಾರಿತ ವಯಸ್ಕರ ಶಿಕ್ಷಣ' ಕಲಿಸುವ ಯೋಜನೆಯನ್ನು ತರುತ್ತಾರೆ. ಈ ಕಾರ್ಯವನ್ನು ನಿರ್ವಹಿಸಲು ಇವರಿಗೆ ಎರಡು ವರ್ಷಗಳ ಗಡುವನ್ನು ವಿಧಿಸಲಾಗಿತ್ತು. ಆದರೆ ಹವಾಮಾನ ವೈಪರೀತ್ಯದ ಪರಿಣಾಮ ನಾಲ್ಕು ವರ್ಷಗಳು ಅಲ್ಲಿರಬೇಕಾಗಿ ಬರುತ್ತದೆ. ಆಫ್ರಿಕಾ ಖಂಡದ ಕೀನ್ಯಾದಲ್ಲಿ ೧೯೭೧ರಿಂದ ೧೯೭೬ರ ವರೆಗೆ ವಯಸ್ಕರ ಶಿಕ್ಷಣಕ್ಕಾಗಿ ದುಡಿಯುತ್ತಾರೆ. ಇವರ ಕಾರ್ಯವೈಖರಿಯನ್ನು ಗಮನಿಸಿದ ಕೀನ್ಯಾ ಸರ್ಕಾರ ೧೯೭೬ಕ್ಕೆ ಇವರ ಅವಧಿ ಮುಗಿದರೂ ಮತ್ತಷ್ಟು ಕಾಲ ತಮ್ಮಲ್ಲೇ ಇರುವಂತೆ, ಸಲಹೆಗಾರರಾಗಿ, ಮಾರ್ಗದರ್ಶಕರಾಗಿ ಮುಂದುವರೆಯುವಂತೆ ಕೋರಿಕೊಳ್ಳುತ್ತದೆ. ಆದರೆ ಒಪ್ಪದ ಭದ್ರಯ್ಯನವರು "ನಾನು ನಿಮ್ಮಲ್ಲಿ ಪ್ರಾರಂಭಿಸಿರುವ ಯೋಜನೆ ನಿಂತು ಹೋದೀತೆಂಬ ಭಯ ಬೇಡ. ನಾನು ತರಬೇತುಗೊಳಿಸಿರುವ ನಿಮ್ಮ ಜನರೇ ಸಮರ್ಥವಾಗಿ ಯೋಜನೆಯನ್ನು ಮುಂದುವರೆಸುತ್ತಾರೆ. ಸ್ಥಳೀಯರ ನೇತೃತ್ವದಲ್ಲಿಯೇ ಯೋಜನೆ ಮುಂದುವರೆಯುತ್ತದೆ, ಭಯ ಬೇಡ"[೪] ಎಂದು ಸಮಾಧಾನಗೊಳಿಸುತ್ತಾರೆ. ಇದು ಭದ್ರಯ್ಯನವರ ವ್ಯಕ್ತಿತ್ವ. ಸಾಕಷ್ಟು ಗೌರವ, ಸಂಬಳ, ಆಳು, ಕಾಳು ನೀಡುವ ಹುದ್ದೆಯನ್ನು ನಿರಾಕರಿಸಿ ತಾಯ್ನಾಡಿಗೆ ಮರಳುತ್ತಾರೆ.

[೩] ಅದೇ : ಪುಟ – ೧೪

[೪] ಅದೇ : ಪುಟ – ೨೩

ಭಾರತದ ವಯಸ್ಕರ ಶಿಕ್ಷಣದ ನೆನಪಾಗುತ್ತದೆ. ವಿಶ್ವದ ನಾನಾ ಕಡೆ ಸೇವೆ ಮಾಡಿದ್ದೇನೆ ಹುಟ್ಟಿದೂರಿಗೆ ಏನಾದರು ಮಾಡಬೇಕೆಂದು ತೀರ್ಮಾನಿಸಿ ಮೈಸೂರಿನಲ್ಲಿ ನೆಲೆ ನಿಂತರು. ಇವರ ಸೇವೆಯನ್ನು ಗಮನಿಸಿದ ರಾಜ್ಯ ಸರ್ಕಾರ ಇವರಿಗೆ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿದರೆ, ಕೇಂದ್ರ ಸರ್ಕಾರ ರಾಷ್ಟ್ರಮಟ್ಟದ ನೆಹರು ಲಿಟರರಿ ಪ್ರಶಸ್ತಿಯನ್ನು ನೀಡಿ ಗೌರವಿಸುತ್ತದೆ. ಅಪ್ಪಟ ಗಾಂಧಿವಾದಿಯಾಗಿದ್ದ ಭದ್ರಯ್ಯನವರು ಸದಾ ಬಿಳಿ ಖಾದಿಯ ಜುಬ್ಬ, ಬಿಳಿಯ ಪಂಚೆ ಧರಿಸುತ್ತಿದ್ದರು. ಯಾವುದೇ ವೃತ್ತಿಯಾಗಲಿ ಅದಕ್ಕೆ ಅದರದೇ ಆದ ಗೌರವ ಘನತೆಗಳಿವೆ ಎನ್ನುವ ಮನೋಭಾವವನ್ನು ಹೊಂದಿದ್ದರು. ಅಪ್ಪಟ ಆಸ್ತಿಕರಾದರೂ ದೇವಸ್ಥಾನಗಳ ಗೊಡವೆಯಿಂದ ದೂರ ಇದ್ದರು. "ದೇವರಿದ್ದಾನೆ, ಅವನು ಯಾರಿಗೂ ಎಂದಿಗೂ ಕೆಡುಕು ಬಯಸುವುದಿಲ್ಲ. ಭೂಮಿಯ ಮೇಲಿರುವ ಸಮುದ್ರ ಒಂದೇ. ಹೆಸರು ಬೇರೆ ಬೇರೆ. ದೇವರು ಒಬ್ಬನೇ ಕರೆಯುವುದು ಮಾತ್ರ ಬೇರೆ ಬೇರೆ"[೫] ಎಂಬುದು ಭದ್ರಯ್ಯನವರು ವಾದವಾಗಿತ್ತು.

ಮುದ್ರಣ, ಬರವಣಿಗೆ, ಪ್ರಚಾರ ಈ ಎಲ್ಲಾ ವಿಚಾರಗಳಲ್ಲೂ ಆಸಕ್ತಿಯನ್ನು ಹೊಂದಿದ್ದ ಭದ್ರಯ್ಯನವರು ೧೯೫೫ರ ಸುಮಾರಿಗೆ ೧೬ ಪುಟಗಳನ್ನು ಒಟ್ಟಿಗೆ ಮುದ್ರಿಸುವ 'ಸಿಲಿಂಡರ್' ಯಂತ್ರವನ್ನು ತಂದು, 'ಚೇತನ ಮುದ್ರಣಾಲಯ'ವನ್ನು ತೆರೆದರು. ಇಂದು 'ಚೇತನ ಬುಕ್ ಹೌಸ್' ಹೆಸರಿನಲ್ಲಿ ಪ್ರಸಿದ್ದವಾಗಿದೆ. ಇವರ ಪ್ರತಿ ನಿತ್ಯದ ದಿನಚರಿ ಎಂದರೆ ಪ್ರತಿದಿನ ಸಂಜೆ ವಾಯುವಿಹಾರಕ್ಕೆಂದು ರಸ್ತೆಗಳಲ್ಲಿ ಅಡ್ಡಾಡುವುದು, ಬೆಳಗಿನ ವೇಳೆ ಬರೆಯುವುದು ಮತ್ತು ಓದುವುದು, ಕಾರ್ಯಕ್ರಮಗಳಿಗೆ ಹೋಗಿ ಬರುವುದು, ಇತರರ ಕಷ್ಟಗಳಿಗೆ ಸಂದಿಸುತ್ತಾ ಸಮಾಜ ಸೇವೆಯಲ್ಲಿ ಕಾಲ ಕಳೆಯುವುದು ಮಾತ್ರ. ಇಳಿ ವಯಸ್ಸಿನಲ್ಲಿ ಅರ್ಬುದರೋಗ ಕಾಣಿಸಿಕೊಂಡು ಕೆಂಪು ರಕ್ತಕಣಗಳಲ್ಲಿ ಕಬ್ಬಿಣದ ಅಂಶ ಕಡಿಮೆಯಾಗಿ ಹಿಮೋಗ್ಲೋಬಿನ್ ಕೊರತೆಯಿಂದ ನಿಶ್ಯಕ್ತಿಗೆ ಒಳಗಾದರು. ಬಿಳಿರಕ್ತಕಣಗಳ ಸಂಖ್ಯೆ ಅಧಿಕವಾಗಿ ಸೋಂಕು ತಗುಲಿ ಅನಾರೋಗ್ಯಕ್ಕೆ ತುತ್ತಾಗುತ್ತಾರೆ. ಆಗಲೂ ದೇವರು ಒಂದೆರಡು ವರ್ಷ ಅನುಮತಿ ನೀಡಿದರೆ ಮಾಡಬೇಕಾದ ಕೆಲಸವನ್ನು ಮುಗಿಸಿ ಹೋಗಬಹುದು. ಮುಗಿಸಿದ ತೃಪ್ತಿಯಾದರೂ ಸಿಗುತ್ತದೆ ಎಂಬ ಮನೋಭಾವವನ್ನು ಹೊಂದಿದ್ದರು. ಅದರಂತೆ ಖಾಯಿಲೆ ಗೊತ್ತಾದ ಮೇಲೂ ನಾಲ್ಕು ವರ್ಷ ಬದುಕಿದ್ದು, ಆ ಅವಧಿಯಲ್ಲಿ ಮತ್ತೆರಡು ಪುಸ್ತಕಗಳನ್ನು ಬರೆದು, ಮಗಳು ಶುಭಂಕರಿಯ ವಿವಾಹವನ್ನು ಮಾಡಿ, ಮೇ ೧೮, ೧೯೮೯ರಲ್ಲಿ ದೈವಾಧೀನರಾಗುತ್ತಾರೆ.

**ಕುವೆಂಪು ಅವರೊಡನೆ ಒಡನಾಟ:** ನ. ಭದ್ರಯ್ಯನವರನ್ನು ಹಾಡಿ ಹೊಗಳಿದ್ದ ಕುವೆಂಪು ಅವರ ಜೊತೆ ಭದ್ರಯ್ಯನವರು ಒಳ್ಳೆಯ ಸಂಬಂಧವನ್ನು ಹೊಂದಿದ್ದರು. ನ. ಭದ್ರಯ್ಯ ಮತ್ತು ಕುವೆಂಪು ಅವರ ಒಡನಾಟದ ಚಿತ್ರಣವನ್ನು ಕುವೆಂಪು ಅವರ ಮಗಳಾದ ತಾರಿಣಿ ಚಿದಾನಂದ ಅವರು ತಮ್ಮ 'ಮಗಳು ಕಂಡ ಕುವೆಂಪು' ಕೃತಿಯಲ್ಲಿ ಸ್ವಾರಸ್ಯಕರವಾಗಿ ಚಿತ್ರಿಸಿದ್ದಾರೆ. ವಿದೇಶ ಪ್ರವಾಸಗಳಲ್ಲಿ ಇರುತ್ತಿದ್ದ ಭದ್ರಯ್ಯನವರು ಒಮ್ಮೆ ಅಮೇರಿಕಾದ ಪೆನ್ನು ತಯಾರಿಕಾ ಕಂಪನಿಗೆ ಭೇಟಿ ಕೊಟ್ಟಿದ್ದು 'ಶೀಫರ್' ಎಂಬ ಬಂಗಾರದ ಬಣ್ಣದ ಪೆನ್ನೊಂದನ್ನು ಕುವೆಂಪು ಅವರಿಗಾಗಿ ತಂದು ನೀಡುತ್ತಾರೆ. ಅದುವರೆಗೆ ಪಾರ್ಕರ್ ಪೆನ್ನನ್ನು ಉಪಯೋಗಿಸುತ್ತಿದ್ದ ಕುವೆಂಪು ಅವರು ಸಹಿ ಮಾಡಲು, ಡೈರಿ ಬರೆಯಲು, ಸಾಹಿತ್ಯದ ಬರವಣಿಗೆ ಎಲ್ಲಕ್ಕೂ ಭದ್ರಯ್ಯನವರು ಕೊಟ್ಟಿದ್ದ ಪೆನ್ನನ್ನೇ ಉಪಯೋಗಿಸುತ್ತಿದ್ದರು. ಶೀಪರ್ ಪೆನ್ನನ್ನು ಬಹಳವಾಗಿ ಮೆಚ್ಚಿಕೊಂಡಿದ್ದ ಕುವೆಂಪು ಅವರು ಕುಲಪತಿಯಾಗಿದ್ದಾಗಲೂ ಬಳಸುತ್ತಿದ್ದರು. ಸುಮಾರು ಹದಿನೈದು ವರ್ಷಗಳ ಕಾಲ ಸುಲಲಿತವಾಗಿ ಬರೆಯುತ್ತಿತ್ತು.

ಪೆನ್ನಿನ ಒಳಭಾಗದಲ್ಲಿ ರಬ್ಬರ್ ಟ್ಯೂಬ್ ಇದ್ದು, ಇಂಕ್ ಬಾಟಲಿಯಲ್ಲಿ ಪೆನ್ನಿನ ನಿಬ್ಬು ಮುಳುಗಿಸಿ ರಬ್ಬರ್ ಟ್ಯೂಬ್ ಅದುಮಿದಾಗ ಪೆನ್ನಿಗೆ ಇಂಕು ತುಂಬಿಕೊಳ್ಳುತ್ತಿತ್ತು. ಹದಿನೈದು ವರ್ಷಗಳ ತರುವಾಯ ರಬ್ಬರ್ ಟ್ಯೂಬ್ ತನ್ನ ಸಾಮರ್ಥ್ಯವನ್ನು ಕಳೆದುಕೊಂಡು ರಿಪೇರಿಗೆ ಬಂದಿತು. ಪೆನ್ನು ರಿಪೇರಿಯವರ ಬಳಿ ಹೋದಾಗ ಪ್ರಯೋಜನವಾಗಿರುವುದಿಲ್ಲ. ಭದ್ರಯ್ಯನವರು ಬಂದಾಗ ಕುವೆಂಪು ಅವರು 'ನೀವು ಕೊಟ್ಟಿದ್ದ ಪೆನ್ನು ತುಂಬಾ ಚೆನ್ನಾಗಿ ಕೆಲಸ ಮಾಡಿತು. ಅದಕ್ಕು ವಯಸ್ಸಾಯಿತು, ಆರೋಗ್ಯ ಹದಗೆಟ್ಟಿತು. ಮೈಸೂರಿನಲ್ಲಿರುವ ವೈದ್ಯರಾರೂ ರಿಪೇರಿ ಮಾಡಲು ಸಾಧ್ಯವಿಲ್ಲ ಎಂದು ಬಿಟ್ಟರು' ಎಂದು ಭದ್ರಯ್ಯನವರಿಗೆ ಪೆನ್ನು ವಾಪಸ್ಸು ನೀಡಿದರು. ಪೆನ್ನು ವಾಪಸ್ಸು ಪಡೆದ ಭದ್ರಯ್ಯನವರು ಸುಮ್ಮನಾಗದೆ ಮತ್ತೆ ಅಮೇರಿಕಾಕ್ಕೆ ಹೋದಾಗ ಶೀಪರ್ ಕಂಪನಿಗೆ ತೆರಳಿ ವಿಶೇಷ ಆಸಕ್ತಿಯಿಂದ ಅದನ್ನು ಸರಿ ಪಡಿಸಿ ತಂದು ಕುವೆಂಪು ಅವರಿಗೆ ನೀಡುತ್ತಾರೆ. ಈ ಬಗೆಗಿನ ಬಾಂಧವ್ಯ ಅವರಿಬ್ಬರ ಬಳಿ ಇದ್ದುದನ್ನು ಲೇಖಕರು ಗುರುತಿಸಿರುವುದು ವಿಶೇಷವಾಗಿದೆ.

ಪುಟ್ಟಗ್ರಾಮದಲ್ಲಿ ಜನಿಸಿದ ಭದ್ರಯ್ಯನವರು ಬಾಲ್ಯದಿಂದಲೇ ಓದಿನಲ್ಲಿ ಆಸಕ್ತಿಯನ್ನು ಹೊಂದಿದ್ದವರು. ಸಮಾಜಸೇವೆ ಎಂಬುದು ವಿದ್ಯಾರ್ಥಿಯಾಗಿದ್ದಾಗಲೇ ಅವರಲ್ಲಿ ಇದ್ದು, ವಿದ್ಯಾರ್ಥಿನಿಲಯ ಸ್ಥಾಪನೆ ಮಾಡಿ, ಅಧ್ಯಯನ, ಓದು, ಬರವಣಿಗೆ ಮೊದಲಾದವುಗಳ ಮೂಲಕ ಹಂತಹಂತವಾಗಿ ಮೇಲೇರಿದವರು. ಪ್ರವಾಸ ಪ್ರಿಯರಾಗಿದ್ದ ಇವರು ವಿದೇಶದಲ್ಲಿ ತಾವು ಕಂಡ ವಯಸ್ಕರ ಶಿಕ್ಷಣವನ್ನು ಭಾರತದಲ್ಲೂ ಆರಂಭಿಸಿ, ವಿಶ್ವದ ಮಟ್ಟದಲ್ಲಿ ಗುರುತಿಸಿಕೊಂಡು, ವಿಶ್ವಸಂಸ್ಥೆಯ ಆಹ್ವಾನದ ಮೇರೆಗೆ ವಿವಿಧ ರಾಷ್ಟ್ರಗಳಲ್ಲಿ ಸಾಕ್ಷರತಾ ಆಂದೋಲನವನ್ನು ಉಂಟುಮಾಡಿದವರು. ಆದರೂ ಎಲೆ ಮರೆ ಕಾಯಿಯ ಹಾಗೆ ಮುಖ್ಯವಾಹಿನಿಯಲ್ಲಿ ಕಾಣಿಸಿಕೊಳ್ಳದೆ ಇರುವುದು ವಿಪರ್ಯಾಸವೇ ಸರಿ.

**ಪರಾಮರ್ಶನ ಗ್ರಂಥಗಳು**

೧. ಅರ್ಜುನಪುರಿ ಅಪ್ಪಾಜಿಗೌಡ : **ನ. ಭದ್ರಯ್ಯ,** ಉದಯಭಾನು ಉನ್ನತ ಅಧ್ಯಯನ ಕೇಂದ್ರ, ಬೆಂಗಳೂರು.
೨. ಚಂದು ಕೆ.ಟಿ : **ನಭ,** ಎಚ್.ಕೆ. ವೀರಣ್ಣಗೌಡ ಪ್ರಕಾಶನ, ಮದ್ದೂರು, ೨೦೦೯
೩. ಜವರೇಗೌಡ. ದೇ. (ಸಂ) : **ಸುವರ್ಣ ಮಂಡ್ಯ,** ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಮಂಡ್ಯ, ಪರಿಷ್ಕೃತ ಆವೃತ್ತಿ ೨೦೦೬
೪. ರಾಜೇಗೌಡ ಹ.ಕ. (ಸಂ) : **ಸಿರಿಯೊಡಲು,** ಸ್ವಾಗತ ಸಮಿತಿ, ೬೩ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ, ಮಂಡ್ಯ, ೧೯೯೪

[೫] ಅದೇ : ಪುಟ – ೨೭